ಸರ್ಕಾರದವರು ಕ್ರಮ ಕೈಗೊಳ್ಳುವರೇ? ಇದಕ್ಕೆ ಪೌರಾಡಳಿತ ರಾಜ್ಯ ಸಚಿವರು ಹೇಗೆ ಉತ್ತರ ಹೇಳುತ್ತಾರೆ? ಈಗ ಒಂದು ಕೆಲಸ ಮಾಡಿ. ನಾನು ನಿಮ್ಮ ಸಮಸ್ಯೆ ಪರಿಹಾರ ಮಾಡಿಕೊಡುತ್ತೇನೆ. ಯಾರು ರೋಡ್ ಸೈಡ್ ಈ ಮುನಿಸಿಪಲ್ ಲಿಮಿಟ್ಸ್‌ನಲ್ಲಿ ಶಾಪ್ಸ್ ಇಟ್ಟುಕೊಂಡಿರುತ್ತಾರೆ, ನ್ಯಾಚುರಲಿ ನಿಮ್ಮವರು ಹೋಗಿ ಅಲ್ಲಿ ಎವಿಕ್ಷನ್ ಮಾಡಿಸಿರುತ್ತಾರೆ. ಅವರೆಲ್ಲಾ ಬಡ ಜನ ಆದ್ದರಿಂದ ಅವರಿಗೆ ಬೇರೆಲ್ಲಾದರೂ ಜೀವನ ಮಾಡಿಕೊಳ್ಳಲು ವ್ಯವಸ್ಥೆ ಮಾಡಿ.

ಶ್ರೀ ಮಿರಾಜುದ್ದೀನ್ ಎನ್.ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೆ, ಈಗ ಆದೇ ರೀತಿ ಲೋಕೋಪಯೋಗಿ ಇಲಾಖೆಯ ರೋಡ್ ಇದೆ. ಈಗ ಅಲ್ಲೇನು 300 ಜನ ಪೆಟ್ಟಿ ಅಂಗಡಿಯವರು ಬಿಸಿನೆಸ್ ಹಚ್ಚಿಕೊಂಡಿದ್ದರು, ಅದಕ್ಕೆ ಮುನಿಸಿಪಾಲಿಟಿಯವರು ಏನೂ ಪರ್ಮಿಷನ್ ಕೊಟ್ಟಿರಲಿಲ್ಲ ಅಥವಾ ಮುನಿಸಿಪಾಲಿಟಿಯಿಂದ ಅವರಿಗೆ ಯಾವ ಸೈಟೂ ಅಲಾಟ್‌ಮೆಂಟ್ ಮಾಡಿದ್ದುದು ಇಲ್ಲ. ವೆಹಿಕಲ್ಸ್ ಮತ್ತು ಜನರಿಗೆ ಓಡಾಡಲಿಕ್ಕೆ ತೊಂದರೆ ಆಗುತ್ತಿದೆ ಎಂದು ಮತ್ತು ಲೋಕೋಪಯೋಗಿ ಇಲಾಖೆಯವರು ಡಬ್ಬಲ್ ರೋಡ್ ಮಾಡುವ ಬಗ್ಗೆ ಅವರದ್ದು ಒಂದು ಪ್ರಪೋಸಲ್ ಇದೆ. ಅದಕ್ಕೋಸ್ಕರ ಅದನ್ನು ಖಾಲಿ ಮಾಡಿ ಕೊಟ್ಟಿದ್ದೇವೆ. ಮತ್ತು ಅವರದ್ದು ನಮಗೆ ಯಾವುದೇ ರೀತಿಯ ಪ್ರಪೋಸಲ್ ಬಂದಿಲ್ಲ. ಆದರೆ ಅಲ್ಲಿ ಯಾವುದೇ ಮುನಿಸಿಪಾಲಿಟಿ ಸೈಟ್ ಬೇರೆ ಇದ್ದರೆ ಅವರಿಗೆ ಅದನ್ನು ತೆಗೆಸಿಕೊಡುವಂತಹ ವ್ಯವಸ್ಥೆಯನ್ನು ನಾನು ಮಾಡುತ್ತೇನೆಂದು ತಮ್ಮ ಮೂಲಕ ಆಶ್ವಾಸನೆ ಕೊಡುತ್ತೇನೆ.

ಶ್ರೀ ಸಂಗಣ್ಣ ಕರಡಿ:- ಸಚಿವರು ಹೇಳಿದ್ದನ್ನು ನಾನೂ ಕೂಡ ಸ್ವಾಗತಿಸುತ್ತೇನೆ. ಆದರೆ 300 ಜನ ಬಡವರ್ಗದ ಜನಾಂಗಕ್ಕೆ ಬೇರೆ ನಮ್ಮ ಮುನಿಸಿಪಾಲಿಟಿಯ ವ್ಯಾಪ್ತಿಯಲ್ಲಿ ಸೈಟ್ಸ್ ಇಲ್ಲ. ಅದಕ್ಕಾಗಿ ಈ ಒಂದು ಪ್ರಪೋಸಲ್ ಮೂಲಕವಾಗಿ ಬೇಡಿಕೆಯನ್ನು ಪ್ರಸ್ತಾವನೆ ಮಾಡಿದ್ದೇನೆ. ಆ ಕಾರಣಕ್ಕಾಗಿ ಅವರಿಗೆ ಬೇರೆ ಒಂದು ಜಾಗವನ್ನು ಆಯ್ಕೆ ಮಾಡಿ ಸ್ಥಳಾವಕಾಶವನ್ನು ಮಾಡಿಕೊಡಬೇಕೆಂದು ಅಧ್ಯಕ್ಷರ ಮೂಲಕ ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್.ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೆ, ಮುನಿಸಿಪಾಲಿಟಿಯಲ್ಲಿ ಬೇರೆ ಯಾವುದೇ ಸೈಟ್ ಇಲ್ಲ ಎಂದರೆ ನಮಗೂ ಮಾಡಲು ತೊಂದರೆ ಇದೆ. ಬೇರೆ ನಾವು ಲ್ಯಾಂಡ್ ಅಕ್ವೈರ್ ಮಾಡಿ ಸೈಟ್ ತೆಗೆದುಕೊಳ್ಳಬೇಕು ಎಂದರೆ ನಮ್ಮ ಹತ್ತಿರ ಫೈನಾನ್ಸಿಯಲ್ ಪೊಸಿಷನ್ ಅಷ್ಟು ಇಲ್ಲ. ನಮ್ಮದೇನು ಡಿಸ್ಕ್ರಿಪ್ಷನ್ ಫಂಡ್ ಇದೆ. ಅದನ್ನು ಬಿಟ್ಟು ಕೆಲಸ ಮಾಡುವುದಕ್ಕೆ ನಮಗೂ ಕಷ್ಟ ಆಗುತ್ತದೆ. ಆದಷ್ಟು ಬೇಗ ನಾವು ಅಲ್ಲಿಂದ ರಿಪೋರ್ಟ್ ತರಿಸಿ ಅವರಿಗೆ ಏನೋ ವ್ಯವಸ್ಥೆ ಮಾಡಿಸಲು ನಾನು ಪ್ರಯತ್ನ ಮಾಡುತ್ತೇನೆ.

ವಿಷಯ:- ಆಲೂರಿಗೆ ಕುಡಿಯುವ ನೀರಿನ ಸರಬರಾಜು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 47 (505)

ಶ್ರೀ ಬಿ.ಬಿ.ಶಿವಪ್ಪ (ಸಕಲೇಶಪುರ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆ ಆಲೂರು ನಗರಕ್ಕೆ ಕುಡಿಯುವ ನೀರಿನ ಸರಬರಾಜಿಗಾಗಿ ಅಂದಾಜು ತಯಾರಿಸಲಾಗಿದೆಯೇ?

ಆ) ಈ ಅಂದಾಜು ತಯಾರಿಸಲು ನಿಧಾನವಾಗಲು ಕಾರಣಗಳೇನು ಹಾಗೂ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಹೌದು.

ಆ) ಇದು 1993-94ನೇ ಸಾಲಿನ ಕಾಮಗಾರಿಗಳಲ್ಲಿ ಸೇರಿದೆ.

ಈ ಪಟ್ಟಣವು ಮೊದಲು ಮಧ್ಯಂತರ ಮಂಡಲ ಪಂಚಾಯ್ತಿ ಇದ್ದು ಪ್ರಸ್ತುತ ಪಟ್ಟಣ ಪಂಚಾಯತ್ ಆಗಿ ಪರಿವರ್ತನೆ ಹೊಂದಿದೆ. ಕರ್ನಾಟಕ ಜಲಮಂಡಳಿ ಈ ಯೋಜನೆಗೆ ಅವಲಂಬಿತ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಪ್ರಯತ್ನಿಸುತ್ತಿದೆ. ಇಂಥ 49 ಯೋಜನೆಗಳ ಜಿಲ್ಲಾ ಪರಿಷತ್‌ನಿಂದ ಮಂಡಳಿಯ ವ್ಯಾಪ್ತಿಗೆ ವರ್ಗಾವಣೆ ಹೊಂದಿದ್ದು ಈ ಯೋಜನೆಗಳಿಗೆ ಪ್ರತ್ಯೇಕ ಅನುದಾನವಿರುವುದಿಲ್ಲ. ಸದರಿ ಯೋಜನೆಯನ್ನು ಪ್ರಸ್ತುತ ವರ್ಷದಲ್ಲಿ ಕೈಗೆತ್ತಿಕೊಳ್ಳಲು ಮಂಡಳಿಯು ಪರಿಶೀಲಿಸುತ್ತಿದೆ.

ಶ್ರೀ ಬಿ.ಎನ್.ಬಚ್ಚೇಗೌಡ:- ನೀರು ಕೊಡುವ ಕೆಲಸ ನಮ್ಮದು. ಮಿಕ್ಕಿದ್ದು ಅವರಿಗೆ ಬರುತ್ತದೆ.

ಶ್ರೀ ಬಿ.ಬಿ.ಶಿವಪ್ಪ:- ಉತ್ತರದಲ್ಲಿ 1993-94ನೇ ಸಾಲಿನ ಕಾಮಗಾರಿಗಳಲ್ಲಿ ಸೇರಿದೆ ಎಂದು ಹೇಳಿದ್ದೀರಿ. ಅದರ ಅಂದಾಜು ಎಷ್ಟು? ಮತ್ತು ಈಗ ಪರಿವರ್ತಿತ ಮಂಡಲ ಪಂಚಾಯತಿ ಈಗ ಪಟ್ಟಣ ಪಂಚಾಯತಿ ಆಗಿ ಪರಿವರ್ತನೆ ಆಗಿದ್ದು ಯಾವಾಗ? ಈಗ ಎಷ್ಟು ವಿಸ್ತೀರ್ಣ ಆಯಿತು? ಮೊದಲು ಎಷ್ಟು ವಿಸ್ತೀರ್ಣ ಇತ್ತು? ದಯವಿಟ್ಟು ತಿಳಿಸಬೇಕು.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೆ, ಈ ಆಲೂರು ಪಂಚಾಯತಿ ಹಿಂದೆ ಮಧ್ಯಂತರ ಮಂಡಲ್ ಪಂಚಾಯತಿ ಆಗಿತ್ತು. ನಂತರ ಪರಿವರ್ತಿತ ಟೌನ್ ಪಂಚಾಯತಿ ಆಗಿ ರಾಜ್ಯದಲ್ಲಿ 49 ಅಂತಹ ಪರಿವರ್ತಿತ ಪಂಚಾಯತಿಗಳು ಈಗ ನಮ್ಮ ಕರ್ನಾಟಕ ನೀರು ಸರಬರಾಜು ಮಂಡಲಿಗೆ ಸೇರಿಕೊಂಡಿದೆ. ಅದರಲ್ಲಿ ತಾವು ತಿಳಿಸಿರತಕ್ಕಂತಹ ಯೋಜನೆಯನ್ನು ಕಾರ್ಯಗತಗೊಳಿಸಬೇಕು ಎಂದು ಹೇಳಿ ಆ ಹಿಂದೆ ಜಿಲ್ಲಾ ಪಂಚಾಯತಿ ಮತ್ತು ಪಂಚಾಯತಿ ವತಿಯಿಂದ ಯೋಜನೆ ರೂಪಿಸಿದ್ದರು. ಅದನ್ನು ಈಗ

ನಾನು ತೆಗೆದುಕೊಂಡು ಆ ಸ್ಕೀಮನ್ನು ತಯಾರಿಸಲು ಮಂಡಲಿಗೆ ತಿಳಿಸಿದ್ದೇನೆ. ಆದಷ್ಟು ಬೇಗ ಆ ಸ್ಕೀಮ್ ತಯಾರಾದ ನಂತರ ಆಲೂರಿಗೆ ನೀರು ಕೊಡುವಂತಹ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ.ಬಿ.ಶಿವಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಈ ಆಲೂರು ನಗರ ನೀರಿನ ಸಮಸ್ಯೆ ಸುಮಾರು ಹತ್ತಾರು ವರ್ಷಗಳಿಂದ ಬಾಕಿ ಆಗುತ್ತಾ ಬರುತ್ತಾ ಇರತಕ್ಕದ್ದು. ತಾವು 1993-94ನೇಯ ಸಾಲಿನಿಂದ ಅದನ್ನು ಸೇರಿಸಿದ್ದೀರಿ. ಆದರೆ ಈಗ ಪುನಃ ವಿಸ್ತಾರ ಆಗಿರುವುದರಿಂದ ಮತ್ತೆ ಹತ್ತಾರು ವರ್ಷಗಳ ಕಾಲ ಮುಂದೆ ಹೋಗಬಾರದು. ತುಂಬಾ ನೀರಿನ ತೊಂದರೆ ಅಲ್ಲಿ ಇದೆ. ಮಂತ್ರಿಗಳು ಆದಷ್ಟು ಬೇಗ ಅವರ ಗಮನ ಆ ಕಡೆಗೆ ಹರಿಸಿ ಮುಂದಿನ ಸಾಲಿನಲ್ಲಿಯಾದರೂ ಅವರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬಹುದೇ? ಏಕೆಂದರೆ ಈಗ ಮಳೆ ಸ್ವಲ್ಪ ಪ್ರಾರಂಭ ಆಯಿತು. ಒಂದು ವ್ಯವಸ್ಥೆ ಮಾಡಬಹುದೇ?

ಶ್ರೀ ಬಿ.ಎನ್.ಬಚ್ಚೇಗೌಡ:- ಈ ಒಂದು ಆಲೂರು ಯೋಜನೆಗೆ ಸುಮಾರು 50 ಲಕ್ಷ ವೆಚ್ಚ ಎಂದು ಹೇಳಿ ಹಿಂದೆ ತೀರ್ಮಾನ ಆಗಿತ್ತು, ಅದಕ್ಕೆ ಟೋಕನ್ ಗ್ರಾಂಟ್ ಎಂದು ಹೇಳಿ 9 ಸಾವಿರ, 8 ಸಾವಿರ, 5 ಸಾವಿರ ಹೀಗೆ ಇಟ್ಟುಕೊಂಡು ಹೋಗಿದ್ದಾರೆ. ಅವರು ಒನ್ ಥರ್ಡ್ ಹಣ ಕಟ್ಟಬೇಕಾಗುತ್ತದೆ. ಆದರೆ ಅದು ಸಾಧ್ಯವಾಗಿಲ್ಲ. ಆದ್ದರಿಂದ ಈಗ ಪರಿವರ್ತಿತ ಪಂಚಾಯತಿಗಳೆಲ್ಲಾ ನಮಗೇ ಬಂದಿರುವುದರಿಂದ ಅದಕ್ಕೆ ತಮಗೆ ತಿಳಿಸಿದ್ದು. ಆ ಸ್ಕೀಮ್ ಬಗ್ಗೆ ಇವತ್ತೇ ಮಾತನಾಡಿ ಹೇಳಿದ್ದೇವೆ. ಅದನ್ನು ತೆಗೆದುಕೊಂಡು ಎಷ್ಟು ಹಣ ಆಗುತ್ತದೆ ಎಂದು ಸಮಗ್ರವಾಗಿ ನೀರು ಕೊಡುವಂತಹ ವ್ಯವಸ್ಥೆ ಆಲೂರು ಗ್ರಾಮಕ್ಕೆ ಒಂದು ಸ್ಕೀಮ್ ಮಾಡಿ, ಅದನ್ನು ಮಾಡುತ್ತೇವೆ. ಹಿಂದೆ ಇದ್ದಂತಹ ಹಣ ಸಾಕಾಗಿಲ್ಲ. ಅದು ತಮಗೇ ಗೊತ್ತಿದೆ. 9 ಸಾವಿರ, 8 ಸಾವಿರ 5 ಸಾವಿರ ಟೋಕನ್ ಮನಿ ಕೊಟ್ಟಿರುವುದು.

ಶ್ರೀ ಬಿ.ಬಿ.ಶಿವಪ್ಪ:- ಇತ್ತೀಚಿನ ಒಂದು ಪದ್ಧತಿ ಪ್ರಕಾರ ಹಿಂದೆ ತಾವೇನು ಎಸ್ಟಿಮೇಟ್ ಮಾಡಿದ್ದೀರಿ, ವಾಟರ್ ಫಿಲ್ಟರ್, ವಗೈರೆ ಎಲ್ಲಾ ಹಾಕಬೇಕು ಎಂದು ಹೇಳಿ. ಅದೆಲ್ಲಾ ತುಂಬಾ ಕಾಸ್ಟ್‌ಲಿ ಆಗುತ್ತದೆ. ಮೇಂಟೆನೆನ್ಸ್ ಕೂಡ ಆ ಸಣ್ಣ ಮುನಿಸಿಪಾಲಿಟಿಗೆ ಕಷ್ಟ ಆಗಬಹುದು ಎಂದು ಹೇಳಿ ಬೇರೆ ವ್ಯವಸ್ಥೆ ಮಾಡುವ ಮೊದಲು ಇತ್ತೀಚೆಗೆ ಬೋರ್‌ಗಳನ್ನು ಹಾಕಲು ವ್ಯವಸ್ಥೆ ಮಾಡಿ ಈಗಾಗಲೇ ಮೂರ್ನಾಲ್ಕು ಬೋರ್‌ಗಳನ್ನು ಹಾಕಿ ಆಗಿದೆ. ಒಳ್ಳೆಯ ವಾಟರ್ ಕೂಡ ಬಂದಿದೆ ಎಂದು ನಾನು ಕೇಳಿದ್ದೇನೆ. ಇನ್ನೂ ನಾಲ್ಕು ಬೋರ್ ಮೊನ್ನೆ ಕೂಡ ನಮಗೆ ಮಂಜೂರು ಆಗಿ ಅದರಲ್ಲಿ ಎರಡು ಬೋರ್ ತೆಗೆದಿದ್ದಾರೆ. ಇನ್ನು ಮೂರು ಬೋರ್ ಬೇರೆ ಕಡೆ ಸ್ಥಳಾಂತರ ಎಂದು ನಾನು ಕೇಳಿದೆ. ಅದರಿಂದ ಇದನ್ನು ಸ್ವಲ್ಪ ತಾವು ಪರಿಶೀಲನೆ ಮಾಡಿ.

ಶ್ರೀ ಬಿ.ಎನ್.ಬಚ್ಚೇಗೌಡ:- ಈಗ 50 ಲಕ್ಷ ಏನಿತ್ತು ಅದಕ್ಕೆ ತಾವು ಹೇಳುವ ಪ್ರಕಾರ 25 ಲಕ್ಷಕ್ಕೆ ಇಳಿದಿದೆ. ಅದು 25 ಲಕ್ಷಕ್ಕೆ ಇಳಿದು ಬಂದಿದೆ. ಆ ದೃಷ್ಟಿಯಲ್ಲಿ ತೆಗೆದುಕೊಂಡು

ಬೇಗ ಮಾಡುತ್ತೇನೆ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ಸಿ.ನಾಣಯ್ಯ (ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ದಿನಾಂಕ 18ನೇ ಜುಲೈ 1996ರ ಹತ್ತನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 67 ಪ್ರಶ್ನೆಗಳ ಪೈಕಿ 33 ಪ್ರಶ್ನೆಗಳ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ವಿಷಯ:- ಹುಬ್ಬಳ್ಳಿ ನಗರದಲ್ಲಿ ಜವಳಿ ನಗರ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 490 (898 (ಎ))

ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ):- ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯಲ್ಲಿ ಮಹದೇವ ಜವಳಿ ಗಿರಣಿಗೆ ಕಾಯಕಲ್ಪ ನೀಡಲು ಸರ್ಕಾರದವರು ಪರಿಶೀಲಿಸುವುದೇ

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಎಸ್.ಪಾಟೀಲ್ (ಜವಳಿ ಸಚಿವರು):-

ಅ) ಹೌದು.

ಆ) ಹುಬ್ಬಳ್ಳಿಯ ಮಹದೇವ ಜವಳಿ ಗಿರಣಿಯು ಕಳೆದ ಅನೇಕ ವರ್ಷಗಳಿಂದ ನಷ್ಟವನ್ನು ಅನುಭವಿಸುತ್ತಿದ್ದುದರಿಂದ, ಕರ್ನಾಟಕ ರಾಜ್ಯ ಜವಳಿ ನಿಯಮಿತವು (ಮಹದೇವ ಜವಳಿ ಗಿರಣಿಯ ಹೋಲ್ಡಿಂಗ್ ಕಂಪನಿ) ಸಿಕ್ ಇಂಡಸ್ಟ್ರೀಯಲ್ ಕಂಪನೀಸ್ (ಸ್ಪೆಷಲ್ ಪ್ರೊವಿಜನ್ಸ್) ಕಾಯಿದೆ 1985 ಕಲಂ 15ರ ಅನ್ವಯ ಅರ್ಜಿಯನ್ನು ಗಿರಣಿಯ ಪುನರುಜ್ಜೀವನಕ್ಕಾಗಿ ಬಿ.ಐ.ಎಫ್.ಆರ್.ಗೆ ಫೆಬ್ರವರಿ 1995ರಲ್ಲಿ ಸಲ್ಲಿಸಿದೆ. ಬಿ.ಐ.ಎಫ್.ಆರ್. ಸಂಸ್ಥೆ ಗಿರಣಿಯ ಪುನರುಜ್ಜೀವನದ ಬಗ್ಗೆ ಇನ್ನೂ ನಿರ್ಧಾರ ಕೈಗೊಳ್ಳಬೇಕಾಗಿರುತ್ತದೆ. ಸದರಿ ಸಂಸ್ಥೆಯ ಆದೇಶದಂತೆ ಸರ್ಕಾರ ಕ್ರಮ ಕೈಗೊಳ್ಳಲಾಗಿದೆ.

ವಿಷಯ:- ಬಸವಕಲ್ಯಾಣ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 493 (727)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ಪಟ್ಟಣಕ್ಕೆ ಕುಡಿಯುವ ನೀರಿನ ತೀವ್ರ ಅಭಾವವನ್ನು